# <u>ನೆರಳು ಮತ್ತು ನಿಜರೂಪ (**Type & Anti-Type)**</u>

ನೆರಳೆಂದರೆ, ಮುಂಬರುವ ಕ್ರಿಸ್ತಯೇಸುವಿನ ಒಂದು ಸೂಚನೆಯಾಗಿದೆ ಅಥವಾ ಮಾದರಿಯಾಗಿದೆ.

ನಿಜರೂಪವೆಂದರೆ, ಹಳೆ ಒಡಂಬಡಿಕೆಯಲ್ಲಿ ಯಾವ ಒಂದು ಕಾರ್ಯ ನೆರಳಾಗಿತ್ತೋ ಅದನ್ನು ಕಾರ್ಯರೂಪಕ್ಕೆ(Reality) ತರುವುದೇ ನಿಜರೂಪ.

ಹಳೆ ಒಡಂಬಡಿಕೆಯಲ್ಲಿ ಒಬ್ಬ ವಿಶೇಷವಾದ ಮನುಷ್ಯನಾದ ಅಬ್ರಹಾಮನ ಜೀವನದಕೆಲವು ದೃಶ್ಯವನ್ನು ಯೇಸುಕ್ರಿಸ್ತನಿಗೆ ಹೋಲಿಕೆಯಾಗಿದೆ.

ಹೋಲಿಕೆ ಮಾಡಲಾಗುವಂತಹ ಕೆಲವು ವ್ಯಕ್ತಿಗಳ ಹೆಸರು ಅಥವಾ ಯಾರು ಯಾರಿಗೆ ಛಾಯೆಯಾಗಿದ್ದಾರೆ.

*ಅಬ್ರಹಾಮ – > ತಂದೆಯಾದ ದೇವರು
*ಇಸಾಕ – > ಯೇಸುಕ್ರಿಸ್ತ
*ರೆಬೆಕ್ಕ – > ಸಭೆ
*ಎಲಿಯೇಸರ್ – > ಪವಿತ್ರಾತ್ಮ

ಬೆಳಿಗ್ಗೆ ಅಬ್ರಹಾಮನು ಎದ್ದು ಕತ್ತೆಗೆ ತಡಿ ಹಾಕಿಸಿ ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ತನ್ನ ಸೇವಕರಲ್ಲಿ ಇಬ್ಬರನ್ನು ತನ್ನ ಮಗನಾದ ಇಸಾಕನನ್ನು ಕರೆದುಕೊಂಡು ದೇವರು ಹೇಳಿದ ಸ್ಥಳಕ್ಕೆ ಹೊರಟನು. ಮೂರನೆಯ ದಿನದಲ್ಲಿ ಅಬ್ರಹಾಮನು ಕಣ್ಣೆತ್ತಿ ನೋಡಲು ಆ ಸ್ಥಳವು ದೂರದಲ್ಲಿ ಕಾಣಿಸಲು ಅವನು ತನ್ನ ಸೇವಕರಿಗೆ – ನೀವೂ ಇಲ್ಲೇ ಕತ್ತೆಯ ಬಳಿಯಲ್ಲಿರಿ; ನಾನೂ ನನ್ನ ಮಗನು ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ ಎಂದು ಹೇಳಿದನು. ಆಗ ಅಬ್ರಹಾಮನು ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ತನ್ನ ಮಗನಾದ ಇಸಾಕನ ಮೇಲೆ ಹೊರಿಸಿ ತನ್ನ ಕೈಯಲ್ಲೇ ಬೆಂಕಿಯನ್ನೂ ಕತ್ತಿಯನ್ನು ತೆಗೆದುಕೊಂಡ ನಂತರ ಅವರಿಬ್ಬರೂ ಹೊರಟು ಹೋದರು.**(ಆದಿ 22:3–6)**

ನಿನ್ನ ಹುಡುಗನ ಮೇಲೆ ಕೈಹಾಕಬೇಡ, ಅವನಿಗೆ ಏನೂ ಮಾಡಬೇಡ. ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಥಿಸುವುದಕ್ಕೆ ಹಿಂದೆಗೆಯಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬುದು ಈಗ ತೋರಬಂತು.**(ಆದಿ 22:12)**

ಅಬ್ರಹಾಮನು ತಂದೆಯಾದ ದೇವರಿಗೆ ಛಾಯೆಯಾಗಿದ್ದಾರೆ ಹೆಂಗೆಂದರೆ ತಂದೆಯಾದ ದೇವರಿಗೆ ಹೇಗೆ ಕ್ರಿಸ್ತನು ಬಲಿಯಾರ್ಪಿಸ ಬೇಕೆಂದು ಮೊದಲೇ ತಿಳಿದಿತ್ತೋ ಹಾಗೆಯೇ ಅಬ್ರಹಾಮನಿಗೂ ತನ್ನ ಮಗನಾದ ಇಸಾಕನನ್ನು ಬಲಿಯರ್ಪಿಸಬೇಕೆಂದು ಮೊದಲೇ ತಿಳಿದಿತ್ತು. ಅಬ್ರಹಾಮನು ಪ್ರಯಾಣ ಮಾಡಿದ

ಮೂರುದಿನ ಅಂದರೆ ಕ್ರಿಸ್ತನ 3 1/2 ವರ್ಷದ ಸೇವೆಯ ಕಾಲಾವಧಿ. ಅಬ್ರಹಾಮನು ತನ್ನ ಸೇವಕರಿಗೆ ದೇವಾರಾಧನೆ ಮಾಡಿ ತಿರಿಗಿ ಬರುತ್ತೇವೆಂದು ಹೇಳಿದನು. ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಬದುಕಿಸಿಕೊಡಲು ದೇವರು ಶಕ್ತನಾಗಿದ್ದಾರೆಂದು ದೃಢವಾಗಿ ನಂಬಿದನು. ಆದ್ದರಿಂದಲೇ ಅಬ್ರಹಾಮನು ವಿಶ್ವಾಸದ ತಂದೆ ಎಂದು ಕರೆಯಲಾಗುತ್ತದೆ.

ಹೇಗೆ ಇಸಾಕನೂ ಬಲಿಗೆ ಬೇಕಾದ ಕಟ್ಟಿಗೆಯನ್ನು ತಾನೇ ಹೊತ್ತುಕೊಂಡನೋ ಹಾಗೆಯೇ ಕ್ರಿಸ್ತನು ತನ್ನ ಶಿಲುಬೆಯನ್ನು ತಾನೇ ಹೊತ್ತು ನಡೆದನು.

ಹೇಗೆ ಇಸಾಕನೂ ತನ್ನ ತಂದೆಯಾದ ಅಬ್ರಹಾಮನಿಗೆ ವಿಧೇಯನಾಗಿದ್ದನೋ ಹಾಗೆಯೇ ಕ್ರಿಸ್ತನು ತಂದೆಯಾದ ದೇವರಿಗೆ ವಿಧೇಯರಾಗಿದ್ದಾರೆ. ಹೇಗೆ ಇಸಾಕನು ತನ್ನನ್ನು ತಾನೇ ಬಲಿಯಾಗಿ ಅರ್ಪಿಸುವುದಕ್ಕೆ ಮೋರಿಯಾ ಬೆಟ್ಟವನ್ನು ಹತ್ತಿದನೋ ಹಾಗೆಯೇ ಕ್ರಿಸ್ತನು ಗೋಲ್ಗೊಥಾ ಬೆಟ್ಟವನ್ನು ಹತ್ತಿದನು.

ಅಬ್ರಹಾಮನು ಯಾವ ರೀತಿ ತನ್ನ ಮಗನಾದ ಇಸಾಕನನ್ನು ಮರಳಿ ಪಡೆದನೋ ಹಾಗೆಯೇ ತಂದೆಯಾದ ದೇವರು ತನ್ನ ಮಗನಾದ ಕ್ರಿಸ್ತಯೇಸುವನ್ನು ಮೂರನೇ ದಿನದಲ್ಲಿ ಮರಳಿ ಪಡೆದನು.

ಯಾವನನ್ನು ಕಳುಹಿಸಲಿ, ಯಾವನು ನನಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು ಕಳುಹಿಸು ಅಂದೆನು.(**ಯೆಶಾಯ 6:8**)

ಕ್ರಿಸ್ತನು ತಂದೆಯಾದ ದೇವರ ಮನಸ್ಸನ್ನು (Mindset) ಅರ್ಥಮಾಡಿಕೊಂಡು ಸಂಪೂರ್ಣವಾಗಿ ತನ್ನನ್ನೇ ಒಪ್ಪಿಸಿಕೊಂಡರು(he completely surrendered himself).

ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನ ಬಳಿಯಲ್ಲಿರುವ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದಿರುವುದಿಲ್ಲವೋ ಆ ಭೂ ನಿವಾಸಿಗಳೆಲ್ಲರೂ ಅದಕ್ಕೆ ನಮಸ್ಕಾರ ಮಾಡುವರು.(**ಪ್ರಕಟನೆ 13:8**)

ನನ್ನ ಸ್ವದೇಶಕ್ಕೂ ನನ್ನ ಬಂಧುಗಳ ಬಳಿಗೂ ಹೋಗಿ ಅವರಲ್ಲೇ ನನ್ನ ಮಗನಾದ ಇಸಾಕನಿಗೆ ಹೆಣ್ಣನ್ನು ತೆಗೆದುಕೊಳ್ಳಬೇಕು. ತರುವಾಯ ಆ ಸೇವಕನು ತನ್ನ ದಣಿಯ ಆಸ್ತಿಯಿಂದ ಶ್ರೇಷ್ಠವಾದ ಒಡವೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಹೊರಟು ಎರಡು ದಿನಗಳ ಮಧ್ಯದಲ್ಲಿರುವ ಅರಾಮ್ ಸೀಮೆಗೆ ಬಂದು ನಾಹೋರನು ವಾಸಿಸಿದ ಊರನ್ನು ಮುಟ್ಟಿದನು.

ಅವನು ಹೀಗೆ ಅಂದುಕೊಳ್ಳುತ್ತಿರುವಾಗಲೇ ಅಬ್ರಹಾಮನ ತಮ್ಮನಾದ ನಾಹೋರನ ಹೆಂಡತಿಯಾಗಿರುವ ಮಿಲ್ಕಳ ಮಗನಾದ ಬೆತೂವೇಲನಿಗೆ ಹುಟ್ಟಿದ ರೆಬೆಕ್ಕಳು ಹೆಗಲಿನ ಮೇಲೆ

ಕೊಡವನ್ನಿಟ್ಟುಕೊಂಡು ಊರ ಹೊರಗೆ ಬರುವುದನ್ನು ಕಂಡೆನು. ಆ ಹುಡುಗಿ ಬಹು ಸುಂದರಿಯಾಗಿಯೂ ಇನ್ನೂ ಮದುವೆಯಾಗದ ಕನ್ನಿಕೆಯಾಗಿಯೂ ಇದ್ದಳು. ಆಕೆ ಬುಗ್ಗೆಯ ಬಳಿಗೆ ಇಳಿದು ಕೊಡದಲ್ಲಿ ನೀರು ತುಂಬಿಕೊಂಡು ಮೇಲಕ್ಕೆ ಬಂದಾಗ ಆ ಸೇವಕನು ಓಡಿಬಂದು ಎದುರುಗೊಂಡು ಅಮ್ಮಾ, ದಯಮಾಡಿ ನಿನ್ನ ಕೊಡದಿಂದ ನನಗೆ ಸ್ವಲ್ಪ ನೀರನ್ನು ಕುಡಿಯುವುದಕ್ಕೆ ಕೊಡು ಎಂದು ಕೇಳಿಕೊಳ್ಳಲು ಆಕೆ ಕುಡಿಯಪ್ಪಾ ಎಂದು ಹೇಳಿ ತತ್ಕ್ಷಣವೇ ಕೊಡವನ್ನು ತನ್ನ ಕೈಯ ಮೇಲೆ ಇಳಿಸಿ ಕುಡಿಯಕೊಟ್ಟಳು. ನೀರು ಕುಡಿಸಿದ ಮೇಲೆ – ನಾನು ನಿನ್ನ ಒಂಟೆಗಳಿಗೂ ಬೇಕಾದಷ್ಟು ನೀರು ತಂದು ಕೊಡುತ್ತೇನೆ ಎಂದು ಹೇಳಿ ಕೊಡದಲ್ಲಿದ್ದ ನೀರನ್ನು ದೋಣಿಯೊಳಗೆ ಹೋಯಿದು ತಿರಿಗಿ ತರುವುದಕ್ಕೆ ಬಾವಿಗೆ ತ್ವರೆಯಾಗಿ ಹೋದಳು. ಹೀಗೆ ಅವನ ಎಲ್ಲಾ ಒಂಟೆಗಳಿಗೂ ತಂದುಕೊಟ್ಟಳು.**(ಆದಿ 24:15–20)**

ಅಂದರೆ ಸುಮಾರು 1000ಲೀ ನೀರನ್ನು ಹೊಯ್ದಳು. ಸ್ವಲ್ಪವು ಬೇಸರಗೊಳ್ಳದೇ ತಾನೇ ಸ್ವತಃ ಈ ಕಾರ್ಯವನ್ನು ಮಾಡುತ್ತಾಳೆ. ಇಲ್ಲಿ ಹತ್ತು ಒಂಟೆ ಅಂದರೆ – > ಹತ್ತು ವಿವಿಧ ಭೋಧನೆಗಳು. (Ten different doctrines)

ನೀರು – > ಅಂದರೆ – > ಸತ್ಯ

ಒಂಟೆಗಳು ಕುಡಿದ ನಂತರ ಅವನು ಆಕೆಯ ಮೂಗಿಗೆ ಅರ್ಧ ತೊಲೆಯ ತೂಕವುಳ್ಳ ಒಂದು ಚಿನ್ನದ ಮೂಗುತಿಯನ್ನು ಆಕೆಯ ಕೈಗಳಿಗೆ ಹತ್ತು ತೊಲೆಯ ತೂಕವುಳ್ಳ ಎರಡು ಚಿನ್ನದ ಬಳೆಗಳನ್ನು ಇಟ್ಟು ನೀನು ಯಾರ ಮಗಳು? ದಯವಿಟ್ಟು ನನಗೆ ಹೇಳು.**(ಆದಿ 24:22)**

ಆಭರಣಗಳೆಂದರೆ ಬೈಬಲ್ನಲ್ಲಿ ಒಂದು ವಿಶೇಷವಾದ ಅರ್ಥವಿದೆ. ಇದು ಹೊರಗಣ ಸೌಂದರ್ಯವನ್ನು ಕುರಿತು ಮಾತಾಡುವುದಿಲ್ಲ. ಒಳಗಣ ಸೌಂದರ್ಯ(Inner beauty).

ಅದೇ ರೀತಿಯಾಗಿ ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ವಿಧೇಯರಾಗಿರಿ. ಅವರಲ್ಲಿ ಕೆಲವರು ದೇವರ ವಾಕ್ಯಕ್ಕೆ ಅವಿಧೇಯರಾಗಿದ್ದರೂ ನೀವೂ ನಿರ್ಮಲರಾಗಿಯೂ ಭಯಭರಿತರಾಗಿಯೂ ನಡೆದುಕೊಳ್ಳುವುದನ್ನು ಅವರು ನೋಡಿ ವಾಕ್ಯೋಪದೇಶವಿಲ್ಲದೆ ತಮ್ಮ ಹೆಂಡತಿಯರಾದ ನಿಮ್ಮ ನಡತೆಯಿಂದಲೇ ಸನ್ಮಾರ್ಗಕ್ಕೆ ಬಂದಾರು. ಜಡೆಹೆಣೆದುಕೊಳ್ಳುವುದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವುದು ವಸ್ತ್ರಗಳನ್ನು ಧರಿಸಿಕೊಳ್ಳುವುದು ಈ ಮೊದಲಾದ ಹೊರಗಣ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು. ಸಾತ್ವಿಕವಾದ ಶಾಂತ ಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ. ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದೂ ಆಗಿದೆ. **(1 ಪೇತ್ರ 3:3)**

ಆ ಮೇಲೆ ತಾನು ತಂದಿದ್ದ ಬೆಳ್ಳಿ ಬಂಗಾರದ ಒಡವೆಗಳನ್ನು ವಸ್ತ್ರಗಳನ್ನು ತೆಗೆದು ರೆಬೆಕ್ಕಳಿಗೆ ಕೊಟ್ಟನು. ಆಕೆಯ ಅಣ್ಣನಿಗೂ ತಾಯಿಗೂ ಸಹ ಬೆಲೆಯುಳ್ಳ ಉಡುಗೊರೆಗಳನ್ನು ಕೊಟ್ಟನು.**(ಆದಿ 24:53)**

ವಸ್ತ್ರಗಳು ಎಂದರೆ ವಿವಿಧ ರೀತಿಯಲ್ಲಿ ಅರ್ಥಗಳಿವೆ. ವಸ್ತ್ರವೆಂದರೆ ನೀತಿಯ ವಸ್ತ್ರ ಎಂದು ಹೇಳಲಾಗುತ್ತದೆ. ಅಂದರೆ ಕ್ರಿಸ್ತನ ನೀತಿಯ ವಸ್ತ್ರಗಳು.

ನೀವೆಲ್ಲರೂ ದೀನ ಮನಸ್ಸೆಂಬ ವಸ್ತ್ರದಿಂದ ಸೊಂಟಾಕಟ್ಟಿಕೊಂಡು ಒಬ್ಬರಿಗೊಬ್ಬರು ಸೇವೆ ಮಾಡಿರಿ. **(1 ಪೇತ್ರ 5:5)**

ನಾವು ಹುಡುಗಿಯನ್ನು ಕರೆದು, ಆಕೆಯ ಅಭಿಪ್ರಾಯ ತಿಳಿದುಕೊಳ್ಳುತ್ತೇವೆ ಎಂದು ಹೇಳಿ ರೆಬೆಕ್ಕಳನ್ನು ಕರೆದು – ಈ ಮನುಷ್ಯನ ಜೊತೆ ಹೋಗುವಿಯಾ ಎಂದು ಕೇಳಿದರು. ಆಕೆ ಹೋಗುತ್ತೇನೆ ಅನ್ನಲು ಅವರು ತಮ್ಮ ತಂಗಿಯಾದ ರೆಬೆಕ್ಕಳನ್ನು ಆಕೆಯ ದಾದಿಯನ್ನೂ ಅಬ್ರಹಾಮನ ಸೇವಕನನ್ನೂ ಅವನ ಸಂಗಡ ಬಂದ ಮನುಷ್ಯರನ್ನು ಸಹ ಕಳುಹಿಸಿದನು.**(ಆದಿ 24:58)**

ತಾನು ಮದುವೆಯಾಗಲಿರುವ ಮದಲಿಂಗನು ಅಂದರೆ ಇಸಾಕನನ್ನು ಎಂದು ನೋಡಿಲವಲಲ್ಲ, ಆತನು ಬಡವನೋ, ಶ್ರೀಮಂತನೋ, ಸುಂದರನೋ ಅಥವಾ ಸುಂದರನಲ್ಲದವನೋ ಆತನ ವಿಷಯವಾಗಿ ಏನೂ ಅರಿಯದವಳು ಆಗಿದ್ದಳು. ಆದರೂ ಅವಳಿಗೆ ಆ ಆಹ್ವಾನ ಬಂದ ಕೂಡಲೇ ಏನನ್ನು ಲೆಕ್ಕಿಸದೇ ತನ್ನನ್ನು ಸಂಪೂರ್ಣವಾಗಿ ಒಪ್ಪಿಸಿಕೊಟ್ಟಳು. ಹಾಗೆಯೇ ನಾವು ಸಹ ಕ್ರಿಸ್ತನು ಹೇಗಿರುವನೆಂದು ಬಲ್ಲವರಲ್ಲ ಕ್ರಿಸ್ತನು ನಮಗೆ ನೀಡಿದ ಈ ವಿಶೇಷ ಆಹ್ವಾನವನ್ನು ಸ್ವೀಕರಿಸಿ ದೇವರು ನಮಗೆ ನೀಡಿದ ಉನ್ನತವಾದ ಬಿರುದಿಗಾಗಿ ನಮ್ಮನ್ನೇ ಸಂಪೂರ್ಣವಾಗಿ ಒಪ್ಪಿಸಿಕೊಡಬೇಕು.

ಅವರು ಆಸ್ಥಳವನ್ನು ಹಾದುಹೋಗುವಾಗ ಮರುಭೂಮಿಯ ಮುಖಾಂತರ ಹಾದು ಹೋದರು. ಮರುಭೂಮಿ(Desert place) ಎಂದರೆ ಕ್ರಿಸ್ತನನ್ನು ಅರಿತು ಸತ್ಯದಲ್ಲಿ ನಡೆಯುವಾಗ ನಮ್ಮ ಸುತ್ತಲಿರುವ ಸ್ನೇಹಿತರು, ಬಂಧೂ ಮಿತ್ರರು ಹೀಗೆ ನಮ್ಮನ್ನು ಬಿಟ್ಟು ಎಲ್ಲರೂ ಅಗಲಿ ಹೋಗುವರು.

ಅವನೇ ನನ್ನ ಧಣಿಯೆಂದು ಆವನು ಹೇಳಿದಾಗ ಆಕೆ ಮುಸುಕಿಹಾಕಿಕೊಂಡಳು. ಆ ಸೇವಕನು ತಾನು ಮಾಡಿದ ಕಾರ್ಯಗಳನ್ನೆಲ್ಲಾ ಇಸಾಕನಿಗೆ ತಿಳಿಸಿದ ನಂತರ ಇಸಾಕನು ಆಕೆಯನ್ನು ತಾಯಿಯಾದ ಸಾರಳ ಗುಡಾರಕ್ಕೆ ಕರೆದುಕೊಂಡು ಹೋದನು ಈ ರೀತಿಯಾಗಿ ಅವನು ರೆಬೆಕ್ಕಳನ್ನು ವರಿಸಿದನು. (ಆದಿ 24:65)
ರೆಬೆಕ್ಕಳು ಹೇಗೆ ಇಸಾಕನನ್ನು ವರಿಸಿದಳೋ ಅದೇ ರೀತಿ ನಮ್ಮ ಮದಲಿಂಗನಾದ ಕ್ರಿಸ್ತನನ್ನು ವರಿಸಲು ಸಭೆಯೆಂಬ ನಾವು ಸಿದ್ಧವಾಗಿರಬೇಕು.

ರೆಬೆಕ್ಕಳು ಇಸಾಕನನ್ನು ವರಿಸಿ ಮಕ್ಕಳನ್ನು ಪಡೆದಳೋ ಹಾಗೆಯೇ ನಾವು ಕ್ರಿಸ್ತನನ್ನು ವರಿಸಿ ಅಂದರೆ ಸಭೆ ಕ್ರಿಸ್ತನೊಂದಿಗೆ ಸೇರಿ ಭೂಮಿಯಲ್ಲಿರುವ ಸಮಸ್ತ ಜನರನ್ನು ಆಳುವೆವು.

**–ಆಮೆನ್–**